ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

**ಸಿ.ಸಿ. ನಂ. 567/2019**

**ಸಾಕ್ಷಿಗೆ ದಿನಾಂಕಃ 16.8.2022 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಂಜುಸ್ವಾಮಿ | ಪಿ.ಡಬ್ಲ್ಯೂ-6 |
| ತಂದೆಯ/ಗಂಡನ ಹೆಸರು | : | ದೇವಪ್ಪ | ಸಿ.ಡಬ್ಲ್ಯೂ-11 |
| ವಯಸ್ಸು | : | 41 | |
| ಉದ್ಯೋಗ | : | ಮ್ಯಾನೇಜರ್ | |
| ವಾಸಸ್ಥಳ | : | ಮೈಸೂರು | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ನಾಗರಾಜು ನನ್ನ ಅಣ್ಣನ ಮಗ. ದಿನಾಂಕ 25.10.2017 ರಂದು ನನ್ನ ಅಣ್ಣನ ಮಗನಾದ ನಾಗರಾಜುಗೆ ಅನಾರೋಗ್ಯವಿದ್ದ ಕಾರಣ ಆತನನ್ನು ಚಾಸ 1 ಮತ್ತು 10 ರವರು ಈ ಕೇಸಿನ ಆರೋಪಿ ಬಳಿ ಚಿಕಿತ್ಸೆ ಗೆ ಕರೆದುಕೊಂಡು ಹೋಗಿರುತ್ತಾರೆ. ಈ ಕೇಸಿನ ಆರೋಪಿ ನಾಗರಾಜು ಕುಂಡಿಗೆ ಇಂಜಕ್ಷನ್ ನೀಡಿರುತ್ತಾರೆ. ಆತನ ಕುಂಡಿ ನೋವಿನಿಂದ ಕೂಡಿದ ಕಾರಣ ಮರುದಿನ ಆತನನ್ನು ಆರೋಪಿ ಬಳಿ ಪುನಃ ಕರೆದುಕೊಂಡು ಹೋದಾಗ, ಆರೋಪಿ ಮಾತ್ರೆಯನ್ನು ನೀಡಿ ಬಿಸಿನೀರು ಶಾಖ ನೀಡಬೇಕೆಂದು ತಿಳಿಸಿ ಕಳುಹಿಸಿರುತ್ತಾನೆ. ಮರುದಿನ ಸದರಿ ಕುಂಡಿ ಕೀವಿನಿಂದ ಕೂಡಿದ ಕಾರಣ ಪುನಃ ಆತನನ್ನು ಆರೋಪಿ ಬಳಿ ನನ್ನ ಅಣ್ಣ ಹಾಗೂ ಅತ್ತಿಗೆ ಕರೆದುಕೊಂಡು ಹೋದಾಗ, ಆರೋಪಿ ನಾಗರಾಜುರವರನ್ನು ಹೆಚ್ಚಿ ನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆ ಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾನೆ. ಅದರಂತೆ ಅತನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆ ಚಿಕಿತ್ಸೆಗೆ ದಾಖಲು ಮಾಡಿರುತ್ತಾರೆ. ವೈದ್ಯರು ನಾಗರಾಜುರವರನ್ನು ಪರೀಕ್ಷಿಸಿ ಅತನು ಬದುಕುವುದ ಕಷ್ಟ ಎಂದು ಹೇಳಿರುತ್ತಾರೆ. ನಾನು ಕೆ.ಆರ್.ಆಸ್ಪತ್ರೆಗೆ ಹೋಗಿ ನಂತರ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾಗರಾಜು ರವರ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 28.10.2017 ರಂದು ಮೃತಪಟ್ಟಿರುತ್ತಾನೆ. ನಂತರ ದೇಹವನ್ನು ಹಂಪಾಪುರ ಗ್ರಾಮಕ್ಕೆ ತಂದಿರುತ್ತೇವೆ. ಆರೋಪಿ ನಾನು ವೈದ್ಯನಾಗಿರುವುದಿಲ್ಲ, ತಪ್ಪಿನ ಚಿಕಿತ್ಸೆ ನೀಡಿರುತ್ತೇನೆ, ಪರಿಹಾರ ಕೊಡುತ್ತೇನೆ, ದೂರು ನೀಡಬೇಡಿ ಎಂದು ಹೇಳಿರುತ್ತಾನೆ. ಆರೋಪಿ 10 ಲಕ್ಷ ಪರಿಹಾರ ಕೊಡುವುದಾಗಿ ಒಪ್ಪಿರುತ್ತಾನೆ, ಅದಕ್ಕೆ ನಾವು ಒಪ್ಪಿ ರುತ್ತೇವೆ. ನಾಗರಾಜುರವರನ್ನು ನಮ್ಮ ಜಮೀನಿನಲ್ಲಿ ದಪನ್ ಮಾಡಿರುತ್ತೇವೆ. ಅರೋಪಿ ಎಷ್ಟು ದಿನಗಳಾದರೂ ಸಹ ತಾನು ಒಪ್ಪಿ ಕೊಂಡಂತೆ ಪರಿಹಾರ ನೀಡಿರುವುದಿಲ್ಲ. ಆತ ಹಣ ನೀಡುವುದಾಗಿ ಒಂದು ಆಧಾರಪತ್ರ ಸಹ ಬರೆದುಕೊಟ್ಟಿರುತ್ತಾರನೆ. ಆದರೆ ಆತ ನೀಡದೇ ಮೋಸ ಮಾಡಿದ ಕಾರಣ ಚಾಸ 1 ರವರು ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ಪೋಲಿಸರು ದೂರು ಪಡೆದುಕೊಂಡ ನಂತರ ಮೃತದೇಹವನ್ನು ತೆಗೆದು ಮರಣೋತ್ತರ ಪರೀಕ್ಷೆ ಮಾಡಿಸಿರುತ್ತಾರೆ. ಆರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾನೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ